<u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

**<u>ಸಿ.ಸಿ. ಸಂಖ್ಯೆ: 23/2020</u>**

**ಸಾಕ್ಷಿಯನ್ನು ದಿಃ02.04.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | |
|---|---|---|
| ಹೆಸರು | ಶಿವಕುಮಾರ | ಡಿ ಡಬ್ಲ್ಯೂ:3 |
| ತಂದೆಯ ಹೆಸರು | ಸಣ್ಣಸ್ವಾಮಪ್ಪ | |
| ವಯಸ್ಸು | 52 ವರ್ಷ | |
| ಉದ್ಯೋಗ | ವ್ಯವಸಾಯ ಮತ್ತು ಸಿವಿಲ್ ಗುತ್ತಿಗೆದಾರ | |
| ವಾಸಸ್ಥಳ | ಹುಣಸೂರು | |

**<u>ಮುಖ್ಯ ವಿಚಾರಣೆ ಃ ಆರೋಪಿ ಪರ ಶ್ರೀ ಎಂ ಇ ಪಿ ವಕೀಲರಿಂದ ಃ</u>**

ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಓಲೆ ರವಿ ಗೊತ್ತು. ಆರೋಪಿಯ ತಂದೆ ಜಿಲ್ಲಾ ಪಂಚಾಯಿತಿಯಲ್ಲಿ ಮೇಸ್ತ್ರಿಯಾಗಿದ್ದರು ನಾನು ಗುತ್ತಿಗೆದಾರರನಾಗಿದ್ದ ಕಾರಣ ಅವರ ಪರಿಚಯವಿತ್ತು. 2012 ರಲ್ಲಿ ಆರೋಪಿಯ ತಮ್ಮನ ಮದುವೆಗಾಗಿ ಹಣದ ಅವಶ್ಯಕತೆ ಇತ್ತು, ಏನಾದರೂ ಹಣದ ವ್ಯವಸ್ಥೆ ಮಾಡಿ ಎಂದು ಆರೋಪಿಯ ತಂದೆ ನನ್ನ ಬಳಿ ಹೇಳಿದ್ದರು. 2012 ರಲ್ಲಿ ಆರೋಪಿಯನ್ನು ಕರೆಸಿ ಓಲೆ ರವಿ ಬಳಿ ರೂ 1 ಲಕ್ಷವನ್ನು ಸಾಲವಾಗಿ ಕೊಡಿಸಿದ್ದೆ. ಆಗ ಆರೋಪಿ ಎರಡು ಎಸ್ ಬಿ ಐ ನ ಚೆಕ್ ಗಳನ್ನು ಓಲೆ ರವಿಗೆ ಕೊಟ್ಟಿದ್ದರು. ಹಣ ಮರುಪಾವತಿಸಿದಾಗ ಚೆಕ್ ನ್ನು ವಾಪಸ್ಸು ಪಡೆಯುವುದಾಗಿ ಭದ್ರತೆಗಾಗಿ ಕೊಟ್ಟಿದ್ದರು. ಆರೋಪಿ ಹೇಳಿದ ಸಮಯಕ್ಕೆ ಹಣ ವಾಪಸ್ಸು ಮಾಡಲಿಲ್ಲ. ಆಗ ಓಲೆ ರವಿರವರು ನೀವು ಹಣ ತೆಗೆಸಿಕೊಟ್ಟಿದ್ದು ಅದನ್ನು ವಾಪಸ್ಸು ಕೊಡಿಸಬೇಕೆಂದು ನನಗೆ ಹೇಳಿದರು. ಚೆಕ್ ಕೊಟ್ಟಿದ್ದಾರಲ್ಲ ಕೇಸು ಹಾಕಿ ಎಂದು ನಾನು ಹೇಳಿದೆ. ಆಗ ಓಲೆ ರವಿರವರು ಒಂದು ಚೆಕ್ ನ್ನು ನನ್ನ ಹೆಸರಿನಲ್ಲಿ ಹಾಜರುಪಡಿಸಿ ಸಿ ಸಿ 322/2013 ನ್ನು ದಾಖಲಿಸಿದರು. ಆ ಪ್ರಕರಣದಲ್ಲಿ ನೋಟೀಸು ಹೋದಾಗ

ಆರೋಪಿ ನನ್ನ ಬಳಿ ಬಂದರು. ಆ ಪ್ರಕರಣದ ಬಾಬ್ತು ಆರೋಪಿ ರೂ 1,22,000/- ನ್ನು ನಗದಾಗಿ ಕೊಟ್ಟರು. ಉಳಿಕೆ ರೂ.8,500/- ಕೊಡಬೇಕಾಗಿತ್ತು. ರೂ.8,500/- ಪಾವತಿ ಮಾಡುವವರೆಗೆ ನಾನು ಚೆಕ್ ನ್ನು ತೆಗೆದುಕೊಳ್ಳುವುದಿಲ್ಲ, ಆ ಹಣವನ್ನು ಕ್ಲೀಯರ್ ಮಾಡಿ ಎಂದು ಹೇಳಿದೆ. ಒಂದು ವಾರದ ನಂತರ ನಾನು ಫೋನ್ ಕರೆ ಮಾಡಿದಾಗ ಆರೋಪಿಗೆ ಅಪಘಾತವಾಗಿತ್ತು. ನಾನು ಓಲೆ ರವಿರವರ ಬಳಿ ಆರೋಪಿಗೆ ಅಪಘಾತವಾಗಿದೆ ಬಂದು ರೂ 8,500/- ಕ್ಲೀಯರ್ ಮಾಡಿಕೊಡುತ್ತಾರೆಂದು ಹೇಳಿದೆ. ಇನ್ನೊಂದು ಚೆಕ್ ನ್ನು ಕೊಡಿ ಆರೋಪಿಗೆ ಹಿಂದಿರುಗಿಸುವ ಎಂದು ನಾನು ಕೇಳಿದಾಗ ಅವರು ಕೊಡಲಿಲ್ಲ. ರೂ.8,500/- ಕೊಟ್ಟು ಚೆಕ್ ತೆಗೆದುಕೊಂಡು ಹೋಗಲಿ ಎಂದು ಓಲೆ ರವಿ ಹೇಳಿದರು. ನಾನು ಆ ಪ್ರಕರಣದಲ್ಲಿ ಹಾಜರಾಗಲಿಲ್ಲ. ಆದ್ದರಿಂದ 2017 ಡಿಸೆಂಬರ್ ನಲ್ಲಿ ಸದರಿ ಪ್ರಕರಣ ವಜಾಗೊಂಡಿತು. ಇನ್ನೊಂದು ಚೆಕ್ ನ್ನು ಆರೋಪಿಗೆ ವಾಪಸ್ಸು ಕೊಡಲಿಲ್ಲ. ರೂ.8,500/- ಆರೋಪಿಯೂ ಕೂಡ ವಾಪಸ್ಸು ಕೊಡಲಿಲ್ಲ. ಓಲೆ ರವಿ ರವರು ಇನ್ನೊಂದು ಚೆಕ್ ನ್ನು ಬೇರೆಯವರ ಮೂಲಕ ಹಾಕಿಸುತ್ತೇನೆಂದು ಹೇಳಿದರು. ಮನುಕುಮಾರ ಎನ್ನುವವರ ಮೂಲಕ ಹಾಕಿದ್ದಾರೆಂದು ಗೊತ್ತಾಯಿತು.

**<u>ಪಾಟೀ ಸವಾಲುಃ ಫಿರ್ಯಾದುದಾರರ ಪರ ಶ್ರೀ ಎಂ ಇ ಎಂ ವಕೀಲರಿಂದಃ</u>**

ನಾನು ಕಳೆದ 30 ವರ್ಷಗಳಿಂದ ಗುತ್ತಿಗೆದಾರನಾಗಿದ್ದೇನೆ. ನಾನು ಮತ್ತು ಓಲೆ ರವಿ ಸ್ನೇಹಿತರು. ಸಾಲದ ಅವಶ್ಯಕತೆ ಇದ್ದಾಗ ಯಾರಿಗಾದರೂ ಹಣ ತೆಗೆಸಿಕೊಡುತ್ತೀರಾ ಎಂದರೆ ಮಾನವೀಯತೆ ದೃಷ್ಠಿಯಿಂದ ಕೊಡಿಸುತ್ತೇನೆ. ನಾನು ಹೇಳಿದ್ದಕ್ಕೆ ಓಲೆ ರವಿ ಹಣ ಕೊಟ್ಟರು. ನಾನು ಆ ರೀತಿ ಹಣ ಕೊಡಿಸುವಾಗ ಓಲೆ ರವಿ ನನ್ನ ಚೆಕ್ ನ್ನು ತೆಗೆದುಕೊಂಡಿಲ್ಲ. ಸಿ ಸಿ ನಂಬರ್ 322/2013 ನ್ನು ನನ್ನ ಹೆಸರಿನಲ್ಲಿ ಆರೋಪಿಯ ವಿರುದ್ಧ ದಾಖಲಿಸಲಾಗಿತ್ತು. ನಾನು ಓಲೆ ರವಿರವರ ಒತ್ತಡದ ಮೇರೆಗೆ ಸಿ ಸಿ ನಂಬರ್ 322/2013 ನ್ನು ಆರೋಪಿಯ ವಿರುದ್ಧ ದಾಖಲಿಸಿದ್ದೆ. ಸಿ ಸಿ ನಂಬರ್ 322/2013 ರಲ್ಲಿ ಆರೋಪಿ ರೂ 1,22,000/- ಕೊಟ್ಟರು. ಸದರಿ ಪ್ರಕರಣದ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಕಾಲಾವಕಾಶ ಕೊಟ್ಟರೆ ಹಾಜರುಪಡಿಸುತ್ತೇನೆ. ಸಿ ಸಿ ನಂಬರ್ 322/2013 ರಲ್ಲಿ ಹಣ

ಕೊಟ್ಟು ರಾಜಿ ಮಾಡಿಕೊಳ್ಳಲಾಗಿದೆ. ಇನ್ನೂ ರೂ.8,500/- ಬಾಕಿ ಇದೆ ಎಂದು ಸಿ ಸಿ ನಂಬರ್ 322/2013 ರಲ್ಲಿ ಬರೆಸಿದ್ದೀರಾ ಎಂದರೆ ಇಲ್ಲ. ಹಣ ಕೊಟ್ಟಾಗ ಚೆಕ್ ನ್ನು ವಾಪಸ್ಸು ಪಡೆದುಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಕೇಳಿದಾಗ ರೂ.8,500/- ಬಾಕಿ ಇದ್ದ ಕಾರಣ ಚೆಕ್ ಕೊಡಲಿಲ್ಲ. ಚೆಕ್ ನ ಪ್ರಕರಣ ನಡೆಯುತ್ತಿದ್ದಾಗ ಓಲೆ ರವಿ ಮತ್ತು ನನಗೂ ವೈಮನಸ್ಸು ಉಂಟಾಗಿ ನಾವಿಬ್ಬರು ಮಾತನಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಿ ಸಿ ನಂಬರ್ 322/2013 ರ ಪ್ರಕರಣ ರಾಜಿ ಆಗಿಲ್ಲ, dismiss for non prosecution ಆಗಿದೆ ಎಂದರೆ ಹಣ ಕೊಟ್ಟಿದ್ದರಿಂದ ನಾನೇ ಆ ಪ್ರಕರಣದಲ್ಲಿ ಹಾಜರಾಗಲಿಲ್ಲ. ನನಗೂ ಓಲೆ ರವಿರವರಿಗೂ ವೈಮನಸ್ಸು ಉಂಟಾಗಿದ್ದರಿಂದ ನಾನು ಪ್ರಕರಣದಲ್ಲಿ ಹಾಜರಾಗದೇ ತಪ್ಪಿಸಿಕೊಂಡರೆ ವಜಾಗೊಳ್ಳುತ್ತದೆ ಎಂಬ ಕಾರಣದಿಂದಲೇ ನಾನು ಹಾಜರಾಗಲಿಲ್ಲ ಎಂದರೆ ಸರಿಯಲ್ಲ. ಸಿ ಸಿ ನಂಬರ್ 322/2013 ಮತ್ತು ಈ ಪ್ರಕರಣಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ಮನುಕುಮಾರ ಎಂಬುವವರು 2020 ರಲ್ಲಿ ದಾಖಲಿಸಿದ್ದಾರೆ ಎಂದರೆ ಸರಿ. ಈ ಪ್ರಕರಣಕ್ಕೂ ಓಲೆ ರವಿರವರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಓಲೆ ರವಿರವರಿಗೆ ಕೊಟ್ಟ ಚೆಕ್ ನ್ನು ವಾಪಸ್ಸುಕೊಡುತ್ತಿಲ್ಲ ಎಂಬ ಬಗ್ಗೆ ನೀವು ಏನಾದರೂ ದೂರು ಕೊಟ್ಟಿದ್ದೀರಾ ಎಂದರೆ ಇಲ್ಲ. ಈ ಪ್ರಕರಣದಲ್ಲಿ ನೋಟೀಸು ಕೊಟ್ಟಾಗ ಮೇಲೆ ಹೇಳಿದ ವಿಷಯಗಳ ಬಗ್ಗೆ ಉತ್ತರದ ನೋಟೀಸು ಕೊಡಲು ತೊಂದರೆ ಇತ್ತೇ ಎಂದರೆ ಪ್ರಕರಣ ದಾಖಲಾಗಿ ವಾರೆಂಟ್ ಆದಾಗ ನನ್ನನ್ನು ಠಾಣೆಗೆ ಕರೆದಿದ್ದರು. ಅಲ್ಲಿಯವರೆಗೆ ನನಗೆ ಗೊತ್ತಿರಲಿಲ್ಲ, ಸಾಕ್ಷಿ ಮುಂದುವರೆದು ನೋಟೀಸು ನನಗೆ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಮಾತುಕತೆಗೆ ಠಾಣೆಗೆ ಹೋಗಿಲ್ಲ. ನಾನು ಹೇಳುವ 2013 ರ ಪ್ರಕರಣಕ್ಕೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಎರಡು ಚೆಕ್ ಗಳನ್ನು ಕೊಟ್ಟಿದ್ದಾರೆಂದು ಹೇಳಿದ್ದು, ಅವುಗಳ ಸಂಖ್ಯೆ ಗೊತ್ತಿದೆಯೇ ಎಂದರೆ ನೆನಪಿಲ್ಲ. ಈ ಪ್ರಕರಣಕ್ಕೂ ನಾನು ಹೇಳುತ್ತಿರುವ ವಿಷಯಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣ

ಮನುಕುಮಾರ ಮತ್ತು ಆರೋಪಿಯ ಮಧ್ಯೆ ಆಗಿರುವ ವ್ಯವಹಾರಕ್ಕೆ ಸಂಬಂಧಿಸಿದ್ದಾಗಿದೆ ಎಂದರೆ ಸರಿಯಲ್ಲ.

ಆರೋಪಿಗೆ ಅನುಕೂಲವಾಗಲಿ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.